# ವಾರ್ತಾ ವಿಶ್ಲೇಷಣೆ

## ಶಿಕ್ಷಣ : ಮೂಲಭೂತ ಹಕ್ಕು

ಇತ್ತೀಚಿನ ದಿನಗಳಲ್ಲಿ ಜನರು ಹಕ್ಕುಗಳಿಗಾಗಿ ಹೋರಾಡುವುದನ್ನು ಎಲ್ಲೆಲ್ಲಿಯೂ ಕಾಣುತ್ತೇವೆ. ಅಭಿವ್ಯಕ್ತಿಯ ಹಕ್ಕು, ಮತದಾನದ ಹಕ್ಕು, ಅಲ್ಪಸಂಖ್ಯಾತರ ಹಕ್ಕು, ಆಸ್ತಿಯ ಹಕ್ಕು ಮತ್ತು ಕಾಪಿ ಹೊಡೆಯುವ ಹಕ್ಕೂ ಕೂಡ—ಹೀಗೆ ಹಕ್ಕಿನ ಕೂಗನ್ನು ಕೇಳುತ್ತೇವೆ. ಆದರೆ ಇತ್ತೀಚೆಗೆ ಹಕ್ಕಿನ ಹೊಸ ಧ್ವನಿಯೊಂದು ಕೇಳಿಬಂತು. ಅದು ಆಶಾದಾಯಕವಾದ ಧ್ವನಿ. ಫೆಬ್ರುವರಿ ತಿಂಗಳಿನಲ್ಲಿ ಬೆಂಗಳೂರಿನ ವಿಧಾನಸಭೆಯ ಹತ್ತಿರವಿರುವ ಬನ್ನಪ್ಪ ಪಾರ್ಕಿನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನರು ನೆರೆದಿದ್ದರು—ಬೀದರ್‌ನಿಂದ ಚಾಮರಾಜ ನಗರದವರೆಗೆ ಕರ್ನಾಟಕದ ಎಲ್ಲೆಡೆಯಿಂದ ಬಂದಿದ್ದರು. ಉದ್ದೇಶ, ಶಿಕ್ಷಣದ ಮೂಲಭೂತ ಹಕ್ಕಿನ ಬೇಡಿಕೆ. ಇದೊಂದು ಅಪೂರ್ವ ಸನ್ನಿವೇಶ. ಸಂವಿಧಾನದ "ಶಿಕ್ಷಣವು ಒಂದು ಮೂಲಭೂತ ಹಕ್ಕು" ಎಂಬ ವಿಷಯಕ್ಕೆ ಸಂಬಂಧಿಸಿದ ೮೩ನೇ ತಿದ್ದುಪಡಿ ಮಸೂದೆಯನ್ನು ಜಾರಿಗೆ ತರಬೇಕೆಂದು ಅವರು ಒತ್ತಾಯಿಸಿದರು. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಪ್ರಾಥಮಿಕ ಶಿಕ್ಷಣದ ದುಃಸ್ಥಿತಿಯ ಕಡೆ ಅವರು ರಾಜಕಾರಿಣಿಗಳ ಗಮನ ಸೆಳೆದರು. ದೇಶದಲ್ಲಿ ಸುಮಾರು ೮ ಕೋಟಿ ಮಕ್ಕಳಿಗೆ ಇನ್ನೂ ಶಾಲೆಗೆ ಹೋಗುವ ಅವಕಾಶವೇ ದೊರೆತಿಲ್ಲವಂತೆ.

ಧಾರವಾಡ ಜಿಲ್ಲೆಯ ಎಮ್ಮೆಕೆರೆ ಎಂಬ ಹಳ್ಳಿಯ ಒಂದು ಶಾಲೆಯಲ್ಲಿ ೬೦೦ ಮಕ್ಕಳಿಗೆ ಕೇವಲ ಎಂಟೇ ಕೊಠಡಿಗಳು. ಶೌಚಾಲಯಗಳಿಲ್ಲ, ಆಟದ ಮೈದಾನವಂತೂ ಇಲ್ಲವೇ ಇಲ್ಲ. ಮಳವಳ್ಳಿ ತಾಲೂಕಿನ ಒಂದು ಶಾಲೆಯಲ್ಲಿ ೧೨೦ ವಿದ್ಯಾರ್ಥಿಗಳಿಗೆ ಕೇವಲ ಇಬ್ಬರೇ ಉಪಾಧ್ಯಾಯರು. ಇನ್ನೂ ಶೋಚನೀಯ ಸ್ಥಿತಿಯಲ್ಲಿರುವ ಶಾಲೆಗಳ ಉದಾಹರಣೆಗಳನ್ನು ನೀಡಬಹುದು. ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

೮೩ನೇ ತಿದ್ದುಪಡಿ ಮಸೂದೆಯನ್ನು ಜಾರಿಗೆ ತರಲು ಬೆಳಗಾವಿಯ ಏಳು ತಾಲೂಕಿನ ಪೋಷಕರೆಲ್ಲ ಸೇರಿ ೨೦೦೦ ಪತ್ರಗಳನ್ನು ಬರೆದಿದ್ದಾರಂತೆ. ಭಾರತ ದೇಶದ ವಿವಿಧ ಭಾಗಗಳಿಂದ ಬಂದ ೩೫೦ ಮಂದಿ ವಿದ್ಯಾರ್ಥಿಗಳು ಕೆಲವು ತಿಂಗಳುಗಳ ಹಿಂದೆ ದೆಹಲಿಯ ಎಂ.ಪಿ.ಗಳ ಮನೆಗಳಿಗೆ ಭೇಟಿಯಿತ್ತು ಸ್ಲೇಟುಗಳ ಮೇಲೆ "ನಮಗೆ ವಿದ್ಯೆ ಬೇಕು" ಎಂದು ಬರೆದು ಪಾರಿತೋಷಕವಾಗಿ ಕೊಟ್ಟರಂತೆ. ಕೆಲವು ಎಂ.ಪಿ.ಗಳು ಮನೆಯ ಹಿಂಭಾಗದಿಂದ ಜಾರಿಕೊಳ್ಳಲು ಪ್ರಯತ್ನಿಸಿದರಂತೆ. ನಮ್ಮ ಪ್ರಸ್ತುತ ಸಮಸ್ಯೆ ಬಡತನ ನಿವಾರಣೆ, ಶಿಕ್ಷಣವಲ್ಲ ಎಂದು ಕೆಲವು ಎಂ.ಪಿ.ಗಳು ಹೇಳಿದರಂತೆ.

ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಸೂಕ್ತ ಪರಿಹಾರ ಎಂಬ ಸ್ವಾಮಿ ವಿವೇಕಾನಂದರ ಹೇಳಿಕೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಬಡತನ ನಿವಾರಣೆಯಾಗಬೇಕಾದರೆ ಮೊದಲು ಶಿಕ್ಷಣ ನೀಡಬೇಕೆಂದು ವಿವೇಕಾನಂದರು ಕರೆ ನೀಡಿದ್ದಾರೆ. ಇತ್ತೀಚೆಗೆ ಅವರ ಕರೆಗೆ ಜನರು ಓಗೊಡುತ್ತಿರುವಂತೆ ಕಂಡುಬರುತ್ತಿದೆ. ಆದರೆ ಸರ್ಕಾರ ಇನ್ನೂ ಕಿವುಡಾಗಿಯೇ ಇರುವುದು ಆಶ್ಚರ್ಯ. ❑

## ಭ್ರಷ್ಟಾಚಾರದ ಉಚ್ಚಾಟನೆ

ಮೆಕ್ಸಿಕೊ ಮತ್ತು ಅಮೆರಿಕದ ಕ್ಯಾಲಿಫೋರ್ನಿಯದಲ್ಲಿ ಭ್ರಷ್ಟಾಚಾರ ಮತ್ತು ಹಿಂಸಾಚಾರಗಳನ್ನು ತಡೆಗಟ್ಟಲು ಒಂದು ಹೊಸ ಮಾರ್ಗವನ್ನು ಪ್ರಾರಂಭಿಸಿದ್ದಾರೆ. ಶಾಲಾ ಮಕ್ಕಳಿಗೆ ಭ್ರಷ್ಟಾಚಾರದಿಂದ ಆಗುವ ದುಷ್ಪರಿಣಾಮಗಳನ್ನು ಮನಮುಟ್ಟುವಂತೆ ಹಲವಾರು ವಿಧಾನಗಳ ಮೂಲಕ ತಿಳಿಸಿಕೊಡುತ್ತಿದ್ದಾರೆಂದು ಲಾಸ್ ಏಂಜಲಿಸ್ ಟೈಮ್ಸ್ ವರದಿ ಮಾಡುತ್ತದೆ. ಇದರ ಪರಿಣಾಮವಾಗಿ ಮಕ್ಕಳು ಮುಂದೆ ದೊಡ್ಡವರಾದಾಗ ಭ್ರಷ್ಟಾಚಾರದಿಂದ ಮುಕ್ತರಾಗಿರುತ್ತಾರೆಂದು ನಂಬಲಾಗಿದೆ. ಮೆಕ್ಸಿಕೊ ದೇಶದ ತಿಜುಆನಾ ನಗರದ ೧೫ ವರ್ಷದ ಬಾಲಕ ಮರಿಯಾನಾ ಜೊರಾಗೋಜಾ ಹೇಳುತ್ತಾನೆ: "ಭ್ರಷ್ಟಾಚಾರದ ಬಗ್ಗೆ ನಾವು ಹೆಚ್ಚು ತಿಳಿದುಕೊಳ್ಳಲು ಬಯಸುತ್ತೇವೆ. ಏಕೆಂದರೆ ಮುಂದೆ ನಾವು ಮುಂದಾಳುಗಳಾದಾಗ ಆ ಜನರು ಮಾಡಿದುದನ್ನೇ ನಾವು ಮಾಡಬಾರದು." ಈ ರೀತಿಯ ಭ್ರಷ್ಟಾಚಾರದ ವಿರುದ್ಧ ಹೋರಾಟ ಪಲೆರ್ಮಾ ಮತ್ತು ಹಾಂಕ್ ಕಾಂಗ್ ನಗರಗಳಲ್ಲೂ ನಡೆಯುತ್ತಿದೆಯಂತೆ.

ಭಾರತವು ಭ್ರಷ್ಟಾಚಾರದಲ್ಲಿ ಜಗತ್ತಿನಲ್ಲಿ ಮೂರನೆಯದೆಂಬ ಕುಖ್ಯಾತಿಯನ್ನು ಪಡೆದಿದೆ. ಆದರೂ ಇಲ್ಲಿ ಭ್ರಷ್ಟಾಚಾರದ ವಿರುದ್ಧ ಯಾವುದೇ ಪರಿಣಾಮಕಾರಿಯಾದ ಚಳುವಳಿ ನಡೆಯುತ್ತಿರುವುದು ಕಂಡುಬರುತ್ತಿಲ್ಲ. ಪ್ರತಿಯೊಬ್ಬರೂ ಭಷ್ಟಾಚಾರದ ವಿರುದ್ಧ ಮಾತನಾಡುತ್ತಾರೆ, ಪ್ರತಿಯೊಂದು ರಾಜಕೀಯ ಪಕ್ಷವೂ ಬೇರೆ ಪಕ್ಷದವರು ಭ್ರಷ್ಟಾಚಾರಿಗಳೆಂದು ಆಪಾದಿಸುತ್ತಾರೆ. ಆದರೆ ತಮ್ಮ ತಮ್ಮ ಭ್ರಷ್ಟತನವನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ, ಬಿಡುವುದಂತೂ ಇಲ್ಲವೇ ಇಲ್ಲ. ಭ್ರಷ್ಟಾಚಾರವನ್ನು ತಡೆಗಟ್ಟಬೇಕಾದ ನ್ಯಾಯಾಂಗವೇ ಭ್ರಷ್ಟವಾಗಿದೆ. ಶ್ರೀರಾಮಕೃಷ್ಣರು ಹೇಳುತ್ತಾರೆ: "ಭೂತೋಚ್ಚಾಟನೆಗೆ ಸಾಸಿವೆ ಕಾಳನ್ನು ಉಪಯೋಗಿಸುತ್ತಾರೆ. ಆದರೆ ಸಾಸಿವೆ ಕಾಳಿನಲ್ಲಿಯೇ ಭೂತ ಸೇರಿಕೊಂಡರೆ ಏನು ಮಾಡುವುದು?" ಭಾರತದ ಸ್ಥಿತಿಯೂ ಇಂದು ಹೀಗೇ ಆಗಿದೆ. ಭ್ರಷ್ಟಾಚಾರವನ್ನು ನಿವಾರಣೆ ಮಾಡಬೇಕಾದವರಲ್ಲಿಯೇ ಭ್ರಷ್ಟಾಚಾರವು ಮನೆ ಮಾಡಿಕೊಂಡಿದೆ.

ಉತ್ತಮ ಸಂಸ್ಕೃತಿಯಿಲ್ಲದೆ ನಾಗರಿಕತೆಯನ್ನು ಬೆಳೆಸಿದರೆ ಇದೇ ಪರಿಸ್ಥಿತಿ ಉಂಟಾಗುತ್ತದೆ. ರಾವಣನ ಲಂಕೆಯಲ್ಲಿ ನಾಗರಿಕತೆಯಿತ್ತು, ಧರ್ಮಾಚರಣೆಯೂ ಇತ್ತು (ವೇದಾಧ್ಯಯನ, ಹೋಮ ಹವನಾದಿಗಳು). ಆದರೆ ನೈತಿಕ ಸಂಸ್ಕೃತಿ ಇರಲಿಲ್ಲ. ನಾವು ಮೊದಲು ಸುಸಂಸ್ಕೃತರಾಗುವುದನ್ನು ಕಲಿಯಬೇಕು. ಆದುದರಿಂದಲೇ ಮೊದಲು ಜನರಿಗೆ ಸರಿಯಾದ ಶಿಕ್ಷಣ ನೀಡಬೇಕೆಂದು ಸ್ವಾಮಿ ವಿವೇಕಾನಂದರು ಒತ್ತಿ ಹೇಳಿದುದು. ❑